**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ ರವರ ನ್ಯಾಯಾಲಯ, ಚಾಮರಾಜನಗರ.**

**ಸಿಸಿ ನಂ : 389/2025**

| | | |
|---|---|---|
| **ಫಿರ್ಯಾದಿ** | : | ಸರ್ಕಾರದ ಪರ **ಸಿಇಎನ್ ಪೊಲೀಸ್ ಠಾಣೆ,** ಚಾಮರಾಜನಗರ. |
| | | **ವಿರುದ್ಧ** |
| **ಆರೋಪಿ** | : | **ರಾಘವೇಂದ್ರರಾವ್** ಅಃ ನರಸಿಂಹಚಾರ್ ಅಃ ಬುಜ್ಜುಸ್ವಾಮಿ ಬಿನ್ ಲೇಟ್ ನಾರಾಯಣ ರಾವ್ ವಯಸ್ಸುಃ 52 ವರ್ಷ, ವಾಸಃ 9-27/ಎ, ಬೇಲ್ಲುಪಲ್ಲಿ ಗ್ರಾಮ, ಪಲ್ಮೇನಾರ್ ತಾಲ್ಲೂಕು, ಭೈರಡ್ಡಿಪಲ್ಲಿ ಮಂಡಳ ಹೋಬಳಿ ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ |

**ದೋ ಷಾ ರೋ ಪ ಣೆ**

**ಶ್ರೀ ಪ್ರಕಾಶ್ ಸಿ.ಡಿ , ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ, ಚಾಮರಾಜನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,**

**ಮೊದಲನೇಯದಾಗಿ,** ದಿನಾಂಕ 19.02.2023 ರಂದು ಬೆಳಿಗ್ಗೆ ಸುಮಾರು 8.30 ಗಂಟೆ ಸಮಯದಲ್ಲಿ ಚಾಮರಾಜನಗರ ಸಿಇಎನ್ ಪೊಲೀಸ್

ಠಾಣಾ ಸರಹದ್ದು, ಚಾಮರಾಜನಗರ ಪಟ್ಟಣದ ಸೋಮವಾರಪೇಟೆ ಗ್ರಾಮದ ಮಾಯಾ ರೆಸ್ಟೋರೆಂಟ್ ಹತ್ತಿರವಿರುವ ಹೆಚ್.ಪಿ ಪೆಟ್ರೋಲ್ ಬಂಕ್ ಬಳಿ ಸಾಕ್ಷಿ-01 ರವರಿಗೆ 1ನೇ ಆರೋಪಿಯಾದ ನೀವು ಪರಿಚಯವಾಗಿ ತಾನು ಮಂತ್ರಾಲಯ ದೇವಸ್ಥಾನದ ಪೂಜಾರಿ ಎಂದು ಸಾಕ್ಷಿ-01 ರವರಿಗೆ ನಂಬಿಸಿ ಮಲೆ ಮಹದೇಶ್ವರ ಬೆಟ್ಟದಲ್ಲಿ ತನ್ನ ಪರ್ಸ್ ಹಾಗೂ ಮೊಬೈಲ್ ಕಳೆದುಹೋಗಿರುವುದಾಗಿ ಮಂತ್ರಾಲಯಕ್ಕೆ ಹೋಗಲು ಹಣ ಬೇಕೆಂದು ಸಾಕ್ಷಿ-01 ರವರಿಂದ 1,000/- ರೂ ಹಣವನ್ನು ಪಡೆದುಕೊಂಡು ದಿನಾಂಕ:20-02-2023 ರಂದು ಆರೋಪಿಯಾದ ನೀವು ಸಾಕ್ಷಿ-01 ರವರಿಗೆ ಮೊಬೈಲ್ ನಂಬರ್ 9108539566 ನಿಂದ ಸಾಕ್ಷಿ -01 ರವರ ಮೊಬೈಲ್ ನಂಬರ್ 9448249767 ಗೆ ಕರೆ ಮಾಡಿ ಸಹಾಯ ಮಾಡುವುದಾಗಿ ನಂಬಿಸಿ ನಿಮ್ಮ 08 ಜನ ಸ್ನೇಹಿತರಿಗೆ 0% ಬಡ್ಡಿದರದಲ್ಲಿ ಹಾಗೂ 50,000/- ರೂ ಸಬ್ಸಿಡಿ ಕೊಡಿಸಿ ಪ್ರತಿಯೊಬ್ಬರಿಗೂ 3,50,000/- ರೂ ಸಾಲ ಕೊಡಿಸುವುದಾಗಿ ನಂಬಿಸಿ ಸಾಕ್ಷಿ-02 ರಿಂದ ಸಾಕ್ಷಿ-10 ರವರ ಆಧಾರ್ ಕಾರ್ಡ್‌ಗಳನ್ನು ಸಾಕ್ಷಿ-01 ರವರ ಮೂಲಕ ಕಳುಹಿಸಿಕೊಂಡು, ಆರೋಪಿ-01 ರವರು ಆರೋಪಿ-02 ಬಂಡಾರು ಹರಿಕೃಷ್ಣ ರವರ ಮೊಬೈಲ್ ನಂ 9966799382 ಗೆ ದಿನಾಂಕ 20-02-2023 ರಂದು 1/- ರೂ, 7,200/- ರೂ, 9,000/- ರೂ, 24,000/- ಹಾಗೂ ದಿನಾಂಕ: 22-02-2023 ರಂದು 10,000/- ರೂ ಒಟ್ಟು 50,201/- ರೂ ಗಳನ್ನು ಫೋನ್ ಪೇ ಮೂಲಕ ಹಾಕಿಸಿಕೊಂಡಿದ್ದು, ಆ ಮೂಲಕ **ಮಾಹಿತಿ ತಂತ್ರಜ್ಞಾನ ಕಾಯ್ದೆ 2008 ಕಲಂ 66(ಡಿ)** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

**ಎರಡನೇಯದಾಗಿ,** 1ನೇ ಆರೋಪಿಯಾದ ನೀವು ಸಾಕ್ಷಿ -01 ರವರಿಂದ ಒಟ್ಟು 51,201/- ರೂ ಹಣವನ್ನು ಪಡೆದುಕೊಂಡು ಸಾಕ್ಷಿ-01 ರಿಂದ ಸಾಕ್ಷಿ-10 ರವರಿಗೆ ಯಾವುದೇ ಸಾಲ ಸೌಲಭ್ಯವನ್ನು ಮಂಜೂರು ಮಾಡಿಸಿಕೊಡದೆ ಆರೋಪಿ-02 ರವರ ಖಾತೆಗೆ ಹಾಕಿಸಿಕೊಂಡಿದ್ದ 50,201/- ರೂ ಗಳ ಪೈಕಿ ಆರೋಪಿಯಾದ ನೀವು ರವರು 46,200/- ರೂ ಗಳನ್ನು ಆರೋಪಿ-02 ರಿಂದ ನಗದು ರೂಪದಲ್ಲಿ ಪಡೆದುಕೊಂಡು ಉಳಿದ 4001/- ರೂ ಗಳನ್ನು ಆರೋಪಿ-02 ರವರಿಗೆ ನೀಡಿ ದುರ್ಬಳಕೆ ಮಾಡಿಕೊಂಡು ಸಾಕ್ಷಿ-1 ರವರ ಹಣವನ್ನು ಅಪ್ರಾಮಾಣಿಕವಾಗಿ ದುರುಪಯೋಗಪಡಿಸಿದ್ದು, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 406** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

**ಕೊನೇಯದಾಗಿ,** ಆರೋಪಿಯಾದ ನೀವು ಸಾಕ್ಷಿ 01 ರವರಿಂದ ಹಣವನ್ನು ಪಡೆದುಕೊಂಡು ದುರ್ಬಳಕೆ ಮಾಡಿಕೊಂಡು ಸಾಕ್ಷಿ-1 ರವರಿಗೆ ವಂಚನೆ ಮಾಡಿದ್ದು, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 420** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

**ಪ್ರಶ್ನೆ : 1** : ನಿಮಗೆ ಓದಿ ಹೇಳಿದುದ್ದು ಅರ್ಥವಾಯಿತೇ ?

**ಉತ್ತರ:**

**ಪ್ರಶ್ನೆ : 2** : ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉತ್ತರ:**

ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಓದಿ ವಿವರಿಸಲಾಗಿ, ಅವರು ಅರ್ಥಮಾಡಿಕೊಂಡು ನೀಡಲಾದ ಉತ್ತರಗಳನ್ನು ನಾನು ನನ್ನ ಸ್ವ-ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢೀಕರಿಸಿರುತ್ತೇನೆ.

ಮೇಲಿನ ದೋಷಾರೋಪಣೆಯನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 07.03.2026.

**(ಪ್ರಕಾಶ್ ಸಿ.ಡಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಸಿಜೆಎಂ, ಚಾಮರಾಜನಗರ.**

**ಆರೋಪಿ ಸಹಿ:**